# ಮೈಸೂರು ವಿಶ್ವವಿದ್ಯಾನಿಲಯ

## ಪೂರ್ವಭಾವಿ ಕಾರ್ಯಸೂಚಿ

## ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆ

30-12-2022

ಬೆಳಗ್ಗೆ 11-30 ಗಂಟೆಗೆ

ಸ್ಥಳ: ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ
ವಿಜ್ಞಾನ ಭವನ ಸಭಾಂಗಣ, ಮೈಸೂರು–06

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 30-12-2022ರಂದು ಶುಕ್ರವಾರ ಬೆಳಗ್ಗೆ 11-30 ಗಂಟೆಗೆ ನಡೆಯಲಿರುವ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿರುವ ವಿಷಯಗಳು.

## ಪೂರ್ವಭಾವಿ ಕಾರ್ಯಸೂಚಿ

| ವಿಷಯ ಸಂಖ್ಯೆ | | ವಿಷಯ ಸಂಕ್ಷಿಪ್ತವಾಗಿ | ಪುಟ ಸಂಖ್ಯೆ ಮತ್ತು ಅಡಕ |
|---|---|---|---|
| I | | ಹಿಂದಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |
| | I.I | ದಿನಾಂಕ:10-11-2022 ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. | 1 |
| II | | ಸಿಂಡಿಕೇಟ್ ಅಥವಾ ಕುಲಪತಿಗಳು ಮಂಡಿಸಿರುವ ವಿಷಯಗಳು | |
| | II.1 | ಒಬ್ಬರು ಶಿಕ್ಷಣ ಮಂಡಳಿ ಸದಸ್ಯರನ್ನು ಹಣಕಾಸು ಸಮಿತಿಗೆ ನಾಮನಿರ್ದೇಶನ ಮಾಡಿರುವ ವಿಷಯವನ್ನು ಅನುಸಮರ್ಥನೆಗಾಗಿ | 1 (ಅನುಬಂಧ-ಅ) |
| | II.2 | "ಭಾರತಿ ಮಹಿಳಾ ಸಮಾಜ ಚಿನ್ನದ ಪದಕ" ದತ್ತಿಸ್ಥಾಪನೆ ಮಾಡುವ ಬಗ್ಗೆ. | 2 |
| III | | ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳು ಮಂಡಿಸಿದ ವಿಷಯಗಳು | |
| | III. 1 | -- | |
| IV | | ಶಿಕ್ಷಣ ಮಂಡಳಿ ಸದಸ್ಯರು ಮಂಡಿಸಿದ ನಿರ್ಣಯಗಳು | |

17/12/2022

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಸ್ಥಳ: ಮೈಸೂರು
ದಿನಾಂಕ::17-12-2022

<u>ವಿಷಯ ಸಂಖ್ಯೆ: I.I</u>

ದಿನಾಂಕ:10–11–2022 ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ.

Subject No. II-1

ಒಬ್ಬರು ಶಿಕ್ಷಣ ಮಂಡಳಿ ಸದಸ್ಯರನ್ನು ಹಣಕಾಸು ಸಮಿತಿಗೆ ನಾಮನಿರ್ದೇಶನ ಮಾಡಿರುವ ವಿಷಯವನ್ನು ಅನುಸಮರ್ಥನೆಗಾಗಿ.

***

ವಾಣಿಜ್ಯ ನಿಕಾಯದ ಡೀನರು, ಶಿಕ್ಷಣ ಮಂಡಳಿ ಹಾಗೂ ಸಿಂಡಿಕೇಟ್ ಸದಸ್ಯರಾಗಿದ್ದ ಪ್ರೊ, ಹೆಚ್. ರಾಜಶೇಖರ್, ಪ್ರಾಧ್ಯಾಪಕರು, ಇವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದ್ದು, ಇವರು (ಪ್ರಭಾರ) ಕುಲಪತಿಗಳಾಗಿ ನೇಮಕಗೊಂಡಿರುವುದರಿಂದ ಇವರಿಂದ ತೆರವಾದ ಹಣಕಾಸು ಸಮಿತಿಯ ಸದಸ್ಯ ಸ್ಥಾನಕ್ಕೆ ಪ್ರೊ. ಜಿ.ಆರ್. ಜನಾರ್ಧನ್, ಪ್ರಾಧ್ಯಾಪಕರು ಹಾಗೂ ಶಿಕ್ಷಣ ಮಂಡಳಿ ಸದಸ್ಯರು ಇವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.(ಅನುಬಂಧ-ಅ)

ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಕ್ರಮವನ್ನು ಶಿಕ್ಷಣ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

ಅನುಬಂಧ-೬

ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಪತ್ರಸಂಖ್ಯೆ: ಯುಎ1/244/2001-2002 ದಿನಾಂಕ: 01-12-2022

## ಅಧಿಸೂಚನೆ

ವಿಷಯ:- ಹಣಕಾಸು ಸಮಿತಿಗೆ ಒಬ್ಬರು ಶಿಕ್ಷಣ ಮಂಡಳಿ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿ ಆದೇಶ ಸಮಸಂಖ್ಯೆ ದಿನಾಂಕ: 18-03-2021.
2. ಹಣಕಾಸು ಅಧಿಕಾರಿಯವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಟಿಪ್ಪಣಿ ಪತ್ರಸಂಖ್ಯೆ:ಹಶಾ/ಆಶಾ/03/2022-23 ದಿನಾಂಕ: 19-11-2022.

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಹಾಗೂ ಶಿಕ್ಷಣ ಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಪ್ರೊ. ಜಿ.ಆರ್, ಜನಾರ್ಧನ್, ಪ್ರಾಧ್ಯಾಪಕರು ಹಾಗೂ ಶಿಕ್ಷಣ ಮಂಡಳಿ ಸದಸ್ಯರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಈ ತಕ್ಷಣದಿಂದ ಜಾರಿಗೆ ಬಂದಂತೆ ಹಣಕಾಸು ಸಮಿತಿಯ ಸದಸ್ಯರನ್ನಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 32(1) **(Vi)**ರ ಅನ್ವಯ ನಾಮನಿರ್ದೇಶನ ಮಾಡಲಾಗಿದೆ.

ಪ್ರೊ. ಜಿ.ಆರ್, ಜನಾರ್ಧನ್, ಇವರ ಹಣಕಾಸು ಸಮಿತಿಯ ಸದಸ್ಯತ್ವವು, ಅವರ ಶಿಕ್ಷಣ ಮಂಡಳಿ ಸದಸ್ಯತ್ವದ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1/12/2022
ಕುಲಸಚಿವ

ಇವರಿಗೆ:

1. ಪ್ರೊ. ಜಿ.ಆರ್, ಜನಾರ್ಧನ್, ಪ್ರಾಧ್ಯಾಪಕರು ಹಾಗೂ ಶಿಕ್ಷಣ ಮಂಡಳಿ ಸದಸ್ಯರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ. ಹೆಚ್. ರಾಜಶೇಖರ್, ಡೀನರು, ವಾಣಿಜ್ಯ ನಿಕಾಯ, ವಾಣಿಜ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಹಣಕಾಸು ಸಮಿತಿಯ ಎಲ್ಲಾ ಮಾನ್ಯ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಶಿಕ್ಷಣ ಮಂಡಳಿ ಎಲ್ಲಾ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ವಿಶ್ವವಿದ್ಯಾನಿಲಯದ ಶಾಖೆ, ರಾಜಭವನ, ಬೆಂಗಳೂರು.
6. ಕಾರ್ಯದರ್ಶಿ, ಶಿಕ್ಷಣ ಇಲಾಖೆ (ವಿ.ಶ್ವವಿದ್ಯಾನಿಲಯ),ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ರಸ್ತೆ, ಬೆಂಗಳೂರು.
7. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ನಿರ್ದೇಶಕರು, ಪಿ.ಎಂ.ಇ.ಬಿ./ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
10. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
11. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು/ ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
12. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಕಛೇರಿ ಪ್ರತಿ.

Subject No. II . 2

**"ಭಾರತಿ ಮಹಿಳಾ ಸಮಾಜ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ.**

-:-

ಡಿ. ಗೌರಮ್ಮ, ಅಧ್ಯಕ್ಷರು, ಭಾರತಿ ಮಹಿಳಾ ಸಮಾಜ (ರಿ.), ಕಾಮಾಕ್ಷಿ ಆಸ್ಪತ್ರೆ ರಸ್ತೆ, ಡಬ್ಬಲ್ ರೋಡ್, ಸರಸ್ವತಿಪುರಂ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ **"ಭಾರತಿ ಮಹಿಳಾ ಸಮಾಜ"** ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಅನುಮತಿ ಕೋರಿ ರೂ.1,05,000/- (ಒಂದು ಲಕ್ಷದ ಐದು ಸಾವಿರ ರೂಪಾಯಿಗಳು ಮಾತ್ರ)ಗಳ ಒಂದು ಬ್ಯಾಂಕರ್ಸ್ ಚೆಕ್ ನೀಡಿದ್ದು ಮುಂಬರುವ ವಾರ್ಷಿಕ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡಬೇಕೆಂದು ಕೋರಿರುತ್ತಾರೆ.

ದಾನಿಗಳು ದತ್ತಿಯ ನಿರ್ಬಂಧನೆಯಲ್ಲಿ ಪ್ರತಿ ವರ್ಷ ಸದರಿ ದತ್ತಿಯ ಮೂಲ ಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮಹಿಳಾ ಅಧ್ಯಯನ ವಿಷಯದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಮೊದಲನೇ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ **ಮಹಿಳಾ ವಿದ್ಯಾರ್ಥಿಗೆ** ಮೇಲಿನ ಚಿನ್ನದ ಪದಕವನ್ನು ನೀಡಬೇಕೆಂದು ಕೋರಿರುತ್ತಾರೆ.

ಮೇಲಿನ ಪ್ರಸ್ತಾನನೆಯ ದತ್ತಿ ಸ್ಥಾಪನೆ ಮಾಡುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31 (2) (X) ಪ್ರಕಾರ ಶಿಕ್ಷಣ ಮಂಡಳಿ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.